## ಅಧ್ಯಾಯ – 8

# ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರ ನಿಕಾಯಗಳು

**[ಸೆಕ್ಷನ್ 4(1) (ಬಿ) (viii)]**

ರಸ್ತೆ ಸಾರಿಗೆ ಸಂಸ್ಥೆ ಕಾಯ್ದೆ 1950 ರ ಪರಿಚ್ಛೇದ 5(2) ರ ಅನುಸಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡಳಿಯಲ್ಲಿ ಅಧ್ಯಕ್ಷರು ಮತ್ತು ಇತರೆ ನಿರ್ದೇಶಕರುಗಳನ್ನು ಒಳಗೊಂಡಂತೆ ಒಟ್ಟು 5ಕ್ಕೆ ಕಡಿಮೆ ಇಲ್ಲದಂತೆ ಮತ್ತು 17 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ರಾಜ್ಯ ಸರ್ಕಾರವು ನೇಮಕ ಮಾಡುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನೇಮಿಸಲ್ಪಡುವ ಅಧಿಕಾರಿ ನಿರ್ದೇಶಕರುಗಳು 7.5 : 1 ರ ಅನುಪಾತದಲ್ಲಿರುತ್ತಾರೆ. ಅಧಿಕಾರೇತರ ನಿರ್ದೇಶಕರು ಪಾರ್ಟ್ ಟೈಂ ನಿರ್ದೇಶಕರಾಗಿರುತ್ತಾರೆ. ಅಧಿಕಾರೇತರ ನಿರ್ದೇಶಕರು ಅಧ್ಯಕ್ಷರಾಗಿ ನೇಮಕಗೊಂಡಲ್ಲಿ ಅವರು ಫುಲ್ ಟೈಂ ನಿರ್ದೇಶಕರಾಗಿರುತ್ತಾರೆ. ಸರ್ಕಾರವು ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ತನ್ನ ಪ್ರತಿನಿಧಿಗಳನ್ನು ಫುಲ್ ಟೈಂ ನಿರ್ದೇಶಕರನ್ನಾಗಿ ನೇಮಿಸಬಹುದಾಗಿರುತ್ತದೆ.

ಅಧಿಕಾರೇತರ ನಿರ್ದೇಶಕರು ಸರ್ಕಾರವು ಇಚ್ಛಿಸುವ ಅವಧಿವರೆಗೆ ಮಂಡಳಿಯ ನಿರ್ದೇಶಕರಾಗಿರುತ್ತಾರೆ. ಅಧಿಕಾರಿ ನಿರ್ದೇಶಕರು ಸರ್ಕಾರವು ಇಚ್ಛಿಸುವವರೆಗೆ ಅಥವಾ ಅವರ ನೇಮಕದ ಆದೇಶದಲ್ಲಿ ತಿಳಿಸಿದ ಹುದ್ದೆಯ ಅವಧಿಯವರೆಗೆ ಮಂಡಳಿಯ ನಿರ್ದೇಶಕರಾಗಿರುತ್ತಾರೆ

ದಿನಾಂಕ 10-12-2009 ರಲ್ಲಿದ್ದಂತೆ ಮಂಡಳಿ ನಿರ್ದೇಶಕರುಗಳ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಶ್ರೀಯುತರು | ಅಧಿಕಾರಿ/ ಅಧಿಕಾರೇತರ |
|---|---|---|
| 1 | ಶ್ರೀ ಆರ್. ಅಶೋಕ<br>ಸನ್ಮಾನ್ಯ ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, | ಅಧ್ಯಕ್ಷರು, |

| | | |
|---|---|---|
| | ಕೇಂದ್ರ ಕಛೇರಿ, ಬೆಂಗಳೂರು | |
| 2 | ಶ್ರೀ ಜಗ್ಗೇಶ್,<br>ಸನ್ಮಾನ್ಯ ಉಪಾಧ್ಯಕ್ಷರು,<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ,<br>ಕೇಂದ್ರ ಕಛೇರಿ, ಬೆಂಗಳೂರು | ಉಪಾಧ್ಯಕ್ಷರು |
| 3 | ಶ್ರೀ ಎಂ. ಆರ್.ಶ್ರೀನಿವಾಸ ಮೂರ್ತಿ, ಭಾಆಸೇ<br>ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನ ಸೌಧ, ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |
| 4 | ಶ್ರೀ ಅಭಿಜಿತ್ ದಾಸ್‌ಗುಪ್ತ, ಭಾಆಸೇ<br>ಮಹಾನಗರ ಆಯುಕ್ತರು, ಬಿ ಎಂ ಆರ್ ಡಿ ಎ,<br>ಕರ್ನಾಟಕ ಸರ್ಕಾರ, ಬೆಂಗಳೂರು. | ಆಹ್ವಾನಿತರು<br>(ಅಧಿಕಾರಿ) |
| 5 | ಶ್ರೀ ಡಿ. ವೆಂಕಟೇಶ್ವರರಾವ್, ಭಾಆಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ,<br>ಕರ್ನಾಟಕ ಸರ್ಕಾರ, ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |
| 6 | ಶ್ರೀ ಎಸ್. ಕೆ. ದಾಶ್, ಭಾಆಸೇ<br>ಜಂಟಿ ಕಾರ್ಯದರ್ಶಿ(ಟಿ),<br>ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ,<br>ಭಾರತ ಸರ್ಕಾರ, ನಂ:1, ಸಂಸದ್ ಮಾರ್ಗ್,<br>ನವದೆಹಲಿ 110 001 | ನಿರ್ದೇಶಕರು<br>(ಅಧಿಕಾರಿ)<br>ಕೇಂದ್ರ ಸರ್ಕಾರದ<br>ಪ್ರತಿನಿಧಿ |
| 7 | ಶ್ರೀ ಎಂ.ಕೆ.ಶಂಕರಲಿಂಗೇಗೌಡ, ಭಾಆಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |
| 8 | ಶ್ರೀ ಐ.ಎಸ್.ಎನ್. ಪ್ರಸಾದ್, ಭಾಆಸೇ<br>ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ,<br>ಕರ್ನಾಟಕ ಸರ್ಕಾರ, ವಿಧಾನ ಸೌಧ,<br>ಬೆಂಗಳೂರು 560 001. | ನಿರ್ದೇಶಕರು<br>(ಅಧಿಕಾರಿ) |
| 9 | ಶ್ರೀ ಸಿದ್ದಯ್ಯ, ಭಾಆಸೇ<br>ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,<br>ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |
| 10 | ಶ್ರೀ ಗೌರವ ಗುಪ್ತ, ಭಾಆಸೇ<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ,<br>ಕೇಂದ್ರ ಕಛೇರಿ, ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |

| | | |
|---|---|---|
| 11 | ಶ್ರೀ ಸೈಯದ್ ಜ಼ಮೀರ್ ಪಾಷಾ, ಭಾಆಸೇ,<br>ವ್ಯವಸ್ಥಾಪಕ ನಿರ್ದೇಶಕರು, ಬೆಂಮನಸಾಸಂಸ್ಥೆ,<br>ಕೇಂದ್ರ ಕಛೇರಿ, ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |
| 12 | ಶ್ರೀ ಎಂ. ಅಬ್ದುಲ್ ಸಲೀಂ, ಭಾಪೊಸೇ<br>ನಿರ್ದೇಶಕರು (ಭ ಹಾಗೂ ಜಾ), ಕರಾರಸಾನಿಗಮ,<br>ಕೇಂದ್ರ ಕಛೇರಿ, ಬೆಂಗಳೂರು. | ನಿರ್ದೇಶಕರು<br>(ಅಧಿಕಾರಿ) |
| 13 | ಶ್ರೀ ಎ. ಎನ್. ಪಾಟೀಲ್, ಕಆಸೇ<br>ವ್ಯವಸ್ಥಾಪಕ ನಿರ್ದೇಶಕರು, ವಾಯವ್ಯ ಕರಸಾಸಂಸ್ಥೆ,<br>ಕೇಂದ್ರ ಕಛೇರಿ, ಹುಬ್ಬಳ್ಳಿ. | ನಿರ್ದೇಶಕರು<br>(ಅಧಿಕಾರಿ) |
| 14 | ಶ್ರೀ ಶಂಕರ ಪಾಟೀಲ್, ಕಆಸೇ<br>ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರಸಾಸಂಸ್ಥೆ,<br>ಕೇಂದ್ರ ಕಛೇರಿ, ಗುಲಬರ್ಗಾ | ನಿರ್ದೇಶಕರು<br>(ಅಧಿಕಾರಿ) |
| 15 | ಶ್ರೀ ಕೆ. ಎ. ರಾಜ್‌ಕುಮಾರ್,<br>ನಿರ್ದೇಶಕರು(ಕಾರ್ಯಾಚರಣೆ), ಕರಾರಸಾನಿಗಮ.,<br>ಕೇಂದ್ರ ಕಛೇರಿ, ಬೆಂಗಳೂರು | ನಿರ್ದೇಶಕರು<br>(ಅಧಿಕಾರಿ) |
| 16 | ಶ್ರೀ ಹೇಮರಾಜು,<br>ನಿರ್ದೇಶಕರು(ತಾಂತ್ರಿಕ), ಕರಾರಸಾನಿಗಮ.,<br>ಕೇಂದ್ರ ಕಛೇರಿ, ಬೆಂಗಳೂರು | ನಿರ್ದೇಶಕರು<br>(ಅಧಿಕಾರಿ) |

ಬಿ.ಎಂ.ಆರ್.ಡಿ.ಎ. ಕಾಯಿದೆ 1985ರ ಸೆಕ್ಷನ್-19 (ಅ) ರ ಪ್ರಕಾರ ಮಹಾನಗರ ಆಯುಕ್ತರು, ಬಿ.ಎಂ.ಆರ್.ಡಿ.ಎ., ರವರು ಆಹ್ವಾನಿತರಾಗಿ ಮಂಡಳಿಯ ಸಭೆಯಲ್ಲಿ ಭಾಗವಹಿಸುತ್ತಾರೆ.

**ದೈನಂದಿನ ಆಡಳಿತದಲ್ಲಿ ಅಸ್ತಿತ್ವದಲ್ಲಿರುವ ಸಮಿತಿ/ ಉಪ ಸಮಿತಿಗಳು.**

1. **ಕೇಂದ್ರ ಖರೀದಿ ಸಮಿತಿ (ಸಿ.ಪಿ.ಸಿ)**
2. **ಕೇಂದ್ರ ಖರೀದಿ ಉಪ ಸಮಿತಿ (ಸಿ.ಪಿ.ಎಸ್.ಸಿ)**
3. **ವಿಭಾಗೀಯ ಸ್ಥಳೀಯ ಖರೀದಿ ಸಮಿತಿ(ಡಿ.ಎಲ್.ಪಿ.ಸಿ.)**

ನಿಗಮದಲ್ಲಿನ ವಾಹನಗಳ ದೈನಂದಿನ ಕಾರ್ಯಾಚರಣೆಗೆ ಅವಶ್ಯಕವಿರುವ ವಾಹನಗಳ ಮತ್ತು ಅದರ ಎಲ್ಲಾ ಬಿಡಿಭಾಗಗಳ ಖರೀದಿಗಾಗಿ ಈ ಸಮಿತಿಗಳು ತೀರ್ಮಾನ ಕೈಗೊಳ್ಳುತ್ತವೆ.

**ಟೆಂಡರ್ ಪರಿಶೀಲನಾ ಸಮಿತಿ**

ಈ ಸಮಿತಿಯು ಟೆಂಡರ್‌ಗಳನ್ನು ಪರಿಶೀಲಿಸಿ ಅರ್ಹ ಟೆಂಡರುದಾರರನ್ನು ಅಖೈರುಗೊಳಿಸುವ ಕ್ರಮ ಕೈಗೊಳ್ಳುತ್ತವೆ.

1) **<u>ಕಮರ್ಷಿಯಲ್ ಕೋರ್ ಗ್ರೂಪ್ (ಸಿ.ಸಿ.ಜಿ)</u>**
2) **<u>ಒಪ್ಪಂದ ನಿರ್ವಹಣಾ ಸಮಿತಿ (ಸಿ.ಎಂ.ಜಿ)</u>**

ಈ ಸಮಿತಿಗಳು ನಿಗಮದ ವಾಣಿಜ್ಯ ವ್ಯವಹಾರ ಮತ್ತು ಒಪ್ಪಂದಗಳ ಕುರಿತು ತೀರ್ಮಾನ ಕೈಗೊಳ್ಳುತ್ತವೆ.

**<u>ಸಿಬ್ಬಂದಿ ಆಯ್ಕೆ ಸಮಿತಿ</u>**

ಈ ಸಮಿತಿಯು ನಿಗಮದ ಸಿಬ್ಬಂದಿ ಮತ್ತು ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಯನ್ನು ನಿರ್ವಹಿಸುತ್ತದೆ.

**<u>ವಿಭಾಗೀಯ ಅಪಘಾತ ಪರಿಶೀಲನಾ ಸಮಿತಿ</u>**

ಈ ಸಮಿತಿಯು ವಿಭಾಗೀಯ ಮಟ್ಟದ್ದಾಗಿದ್ದು, ಅಪಘಾತಗಳ ಪರಿಶೀಲನೆ ಮಾಡಿ ಪರಿಹಾರ ನೀಡಲು ಶಿಫಾರಸ್ಸುಗಳನ್ನು ಸಲ್ಲಿಸುತ್ತದೆ.

**<u>ಕನ್ನಡ ಅನುಷ್ಠಾನ ಸಮಿತಿ</u>**

ಈ ಸಮಿತಿಯು ನಿಗಮದ ದೈನಂದಿನ ಆಡಳಿತದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರುವ ಕುರಿತು ಕಾರ್ಯ ನಿರ್ವಹಿಸುತ್ತದೆ.

ಈ ಕುರಿತು ಮೇಲೆ ತಿಳಿಸಲಾದ ಸಮಿತಿಗಳ ಬಗ್ಗೆ ಮತ್ತು ಈ ಸಮಿತಿಗಳು ನಡೆಸಿದ ಸಭೆ/ ನಡೆವಳಿಗಳ ವಿವರಗಳು ಸಾರ್ವಜನಿಕರಿಗೆ ಮುಕ್ತವಾಗಿದ್ದು, ಈ ಕುರಿತು ಮಾಹಿತಿಯನ್ನು ಪಡೆಯಲು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ಸಂಪರ್ಕಿಸಬಹುದಾಗಿದೆ.